# ಇರಾನ್‌ನಲ್ಲಿ ಪೆಟ್ರೋಲ್ ಬೆಲೆ ₹7!



ಇರಾನ್ ದೇಶದ ಟೆಹರಾನ್‌ನ ಅಲಿ

'ಇರಾನಿಗಳ ಕಲ್ಪನೆಯಲ್ಲಿ ಭಾರತ ಎಂದರೆ 72 ರಾಷ್ಟ್ರಗಳ ಗುಚ್ಛ!' ಮೈಸೂರು ವಿಶ್ವವಿದ್ಯಾಲಯದ ಕಾನೂನು ವಿಭಾಗದಲ್ಲಿ ಪಿಎಚ್.ಡಿ ಮಾಡುತ್ತಿರುವ, ಇರಾನ್ ದೇಶದ ಟೆಹರಾನ್‌ನ ಅಲಿ –ಹೀಗೆ ವ್ಯಾಖ್ಯಾನಿಸುತ್ತಾರೆ.

'ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಹೀಗೆ ಬಹು ವಿಧದ ಧರ್ಮ, ಜಾತಿಗಳಿಂದ ಕೂಡಿದ, ವಿಭಿನ್ನ ಸಂಸ್ಕೃತಿಯನ್ನು ಮೇಳೈಸಿಕೊಂಡಿರುವ ದೇಶ. ಇಲ್ಲಿನ ಜನರು ಧಾರ್ಮಿಕ ವಿಷಯಗಳಿಗಾಗಿ ಗಂಭೀರವಾಗಿ ಜಗಳ ಮಾಡುವುದಿಲ್ಲ. ಸಣ್ಣ ಪುಟ್ಟ ಜಗಳ ಇದ್ದೇ ಇರುತ್ತದೆ. ಆದರೆ, ನಮ್ಮ ದೇಶದಲ್ಲಿ ಪರಿಸ್ಥಿತಿ ಇದಕ್ಕಿಂತ ಭಿನ್ನ' ಎನ್ನುತ್ತಾರೆ.

ಎಲ್‌ಎಲ್ಎಂ ಮಾಡಲೆಂದು ಭಾರತಕ್ಕೆ 2014ರಲ್ಲಿ ಬಂದ ಅವರಿಗೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕೋರ್ಸ್ ಪೂರ್ಣಗೊಳಿಸುವ ಇರಾದೆ ಹೊಂದಿದ್ದರು. ಆದರೆ ಅಲ್ಲಿನ ಕಾನೂನು ವಿಭಾಗದ ಪ್ರಾಧ್ಯಾಪಕರಿಗೆ ಸರಿಯಾಗಿ ಇಂಗ್ಲಿಷ್ ಬರುವುದಿಲ್ಲ ಎಂಬ ಕಾರಣಕ್ಕೆ ತಮ್ಮ ಗಮ್ಯವನ್ನು ಮೈಸೂರಿನತ್ತ ತಿರುಗಿಸಿದರಂತೆ.

'ಬೆಂಗಳೂರಿನಲ್ಲಿ ಮೂರು ತಿಂಗಳು ಕಳೆದೆ. ಅದು ಶರವೇಗದಲ್ಲಿ ಬೆಳೆಯುತ್ತಿರುವ ನಗರಿ. ಅದೇ ರೀತಿ ವಾಯುಮಾಲಿನ್ಯ, ಸಂಚಾರ ದಟ್ಟಣೆಯಂತಹ ಕೆಲ ಸಮಸ್ಯೆಗಳೂ ಉಲ್ಬಣಗೊಳ್ಳುತ್ತಿವೆ. ಆದರೆ ಮೈಸೂರು ಸ್ವಚ್ಛ, ಸುಂದರ ನಗರಿ. ಜೀವನ ನಿರ್ವಹಣೆ ವೆಚ್ಚವೂ ಕಡಿಮೆ. ಈ ಕಾರಣಕ್ಕೆ ಇಲ್ಲಿಗೆ ಬಂದೆ' ಎಂದು ವಿವರಿಸುತ್ತಾರೆ ಅವರು.

ಮೈಸೂರಿನ ವಿಜಯನಗರದಲ್ಲಿ ನೆಲೆಸಿರುವ ಅಲಿ ಅವರಿಗೆ ಅಧ್ಯಯನವೇ ಪ್ರಮುಖ ಹವ್ಯಾಸವಂತೆ. ಪ್ರತಿದಿನ ಫುಟ್‌ಬಾಲ್ ಆಡುವುದು, ಜಿಮ್ ಮಾಡುವುದು ಕಾಯಂ. ವಾರದಲ್ಲಿ ಒಮ್ಮೆಯಾದರೂ ಕುಕ್ಕರಹಳ್ಳಿ ಕೆರೆ, ಕಾರಂಜಿ ಕೆರೆ, ಚಾಮುಂಡಿ ಬೆಟ್ಟಕ್ಕೆ ಹೋಗುವ ಅಭ್ಯಾಸ ಇಟ್ಟುಕೊಂಡಿದ್ದಾರಂತೆ.

'ಮೈಸೂರಿನ ಬಗ್ಗೆ ಸಾಕು, ನಿಮ್ಮೂರಿನ ಬಗ್ಗೆ ಹೇಳಿ' ಎಂದು ಪ್ರಶ್ನಿಸಬೇಕು ಎನ್ನುವ ವೇಳೆಗೆ ಅವರೇ ಮಾತು ಶುರುವಿಟ್ಟುಕೊಂಡರು. 'ಜೀವನದ ಗುಣಮಟ್ಟದ ಇಲ್ಲಿಗಿಂತ ಇರಾನ್‌ನಲ್ಲಿ ಉತ್ತಮವಾಗಿದೆ. ಇಲ್ಲಿನ ಹಾಗೆ ಕುಡಿಯುವ ನೀರನ್ನು ಹೊರಗೆ ಕೊಳ್ಳುವುದಿಲ್ಲ. ವಿದ್ಯುತ್, ಕುಡಿಯುವ ನೀರು, ಹಾಗೂ ಅಡುಗೆ ಅನಿಲ ಕೊಳವೆ ಮೂಲಕ ಮನೆಗೆ ನೇರವಾಗಿ ಬರುತ್ತದೆ. ಇದಕ್ಕೆ ಯಾವುದೇ ಸಮಸ್ಯೆ ಇಲ್ಲ. ಆದರೆ ಬೆಂಗಳೂರಿನಂತೆ ಅಲ್ಲೂ ವಾಯು ಮಾಲಿನ್ಯ, ಶಬ್ದ ಮಾಲಿನ್ಯ, ವಾಹನ ದಟ್ಟಣೆ ಸಮಸ್ಯೆ ಹೆಚ್ಚು' ಎಂದರು.

'ಭಾರತದಲ್ಲಿ ಒಂದೇ ಸ್ಥಳದಲ್ಲಿ ಆಗರ್ಭ ಶ್ರೀಮಂತ ಹಾಗೂ ಕಡುಬಡವರು ವಾಸ ಮಾಡುತ್ತಾರೆ. ಆದರೆ, ನಮ್ಮ ದೇಶದಲ್ಲಿ ಶ್ರೀಮಂತರೇ ಒಂದು ಕಡೆ, ಬಡವರು ಇನ್ನೊಂದು ಕಡೆ ವಾಸ ಮಾಡಬೇಕು. ಬಡವರು ಶ್ರೀಮಂತರ ಬಡಾವಣೆ, ಮನೆಗಳಿಗೆ ಕಾಲಿಡುವಂತಿಲ್ಲ. ಆದರೆ ಇಲ್ಲಿ ಎಲ್ಲಿ ಬೇಕಾದರೂ ಹೋಗಬಹುದು. ಇದು ನನ್ನ ಗಮನ ಸೆಳೆದ ಅಂಶ' ಎಂದು ಹೇಳುತ್ತಾರೆ.

ಇರಾನ್‌ನಲ್ಲಿ ಪೆಟ್ರೋಲಿಯಂ ಉತ್ಪನ್ನ ತುಂಬಾ ಅಗ್ಗ. ಒಂದು ಲೀಟರ್ ಪೆಟ್ರೋಲ್ ಬೆಲೆ ಕೇವಲ ₹7. ಆದರೆ, ಇಲ್ಲಿ ₹70. ಇದು ಅತ್ಯಂತ ದುಬಾರಿ ಎಂದು ಅಚ್ಚರಿ ವ್ಯಕ್ತಪಡಿಸುತ್ತಾರೆ.

'ಭಾರತೀಯ ಜನರು ಸ್ನೇಹಜೀವಿಗಳು. ಆದರೆ, ನಮ್ಮ ಹಾಗೂ ಬೇರೆ ದೇಶದವರು ಅಷ್ಟು ಸ್ನೇಹಜೀವಿಗಳಲ್ಲ. ಇಲ್ಲಿನ ಜನ ಇರುವುದರಲ್ಲೇ ತೃಪ್ತಿ ಕಾಣುತ್ತಾರೆ. ಆದರೆ, ನಮ್ಮ ದೇಶದ ಜನರಿಗೆ ತೃಪ್ತಿ ಎಂಬುದೇ ಇಲ್ಲ. ಎಷ್ಟೇ ಸಂಪಾದಿಸಿದರೂ ಇನ್ನೂ ಬೇಕು ಎನ್ನುವ ಸ್ವಭಾವ' ಎನ್ನುತ್ತಾರೆ.

ಭಾರತೀಯ ಆಹಾರ ಇಷ್ಟವಾಗುತ್ತದೆ. ವೆಜ್ ಇಷ್ಟ ಪಡುತ್ತೇನೆ. ವಿಶೇಷವಾಗಿ ಮಸಾಲಾ ದೋಸೆ, ಅನ್ನದ ಪದಾರ್ಥ, ಸಾಂಬಾರ್, ಚಿಕನ್ ಬಿರಿಯಾನಿ ಇಷ್ಟವಾಗುವ ಆಹಾರ. ನಮ್ಮ ದೇಶದಲ್ಲಿ ಚಿಕನ್ ಬಿರಿಯಾನಿ ಮಾಡುವುದಿಲ್ಲ' ಎನ್ನುವ ಅವರು 'ಇದು ಭಾರತೀಯ ಚಿಕನ್ ಬಿರಿಯಾನಿ' ಎಂಬ ಬಿರುದನ್ನೂ ನೀಡುತ್ತಾರೆ.

'ಇಲ್ಲಿ ಪ್ರತಿದಿನ ಒಮ್ಮೆಯಾದರೂ ಭಾರತೀಯ ಆಹಾರವನ್ನು ಸೇವಿಸುತ್ತೇನೆ. ಬೆಳಿಗ್ಗೆ ತಿಂಡಿಗೆ ಚೀಸ್, ಬ್ರೆಡ್, ಜೇನುತುಪ್ಪ, ಬೆಣ್ಣೆ ತಿನ್ನುತ್ತೇನೆ. ಮಧ್ಯಾಹ್ನದ ಊಟಕ್ಕೆ ಅನ್ನ ಪದಾರ್ಥ, ಚಿಕನ್, ಸಾಂಬಾರ್ ಹೀಗೆ ಯಾವುದೇ ಸಿಕ್ಕರೂ ತಿನ್ನುತ್ತೇನೆ. ರಾತ್ರಿಗೆ ವೆಜ್ ಅಥವಾ ಚಿಕನ್, ಮಟನ್, ಮೀನು ಯಾವುದಾದರೂ ಒಂದು ಇರಲೇಬೇಕು' ಎನ್ನುತ್ತಾರೆ.

ಅಲಿ ಅವರಿಗೆ ಕನ್ನಡದ ಬಗ್ಗೆ ವಿಶೇಷ ಪ್ರೀತಿ. ಸ್ನೇಹಿತರೊಂದಿಗೆ ಮಾತನಾಡಲು ಕೆಲ ಕನ್ನಡ ಪದಗಳನ್ನೂ ಕಲಿತಿದ್ದಾರೆ. 'ಕಾಫಿ ಆಯ್ತಾ?' 'ಇಲ್ಲಿ ಕುಳಿತುಕೊಳ್ಳುತ್ತೇನೆ', 'ತುಂಬಾ ಚೆನ್ನಾಗಿದೆ', 'ನೀನು ಚೆನ್ನಾಗಿದ್ದೀಯಾ', 'ಹೌದಾ...' ಹೀಗೆ ಅನೇಕ ಪದಗಳನ್ನು ಲೀಲಾಜಾಲವಾಗಿ ತಮ್ಮದೇ ಶೈಲಿಯಲ್ಲಿ ಉಚ್ಚರಿಸುತ್ತಾರೆ. ಅದು ಕೇಳಲು ಬಲು ಇಂಪಾಗಿತ್ತು.

ಭಾರತಕ್ಕೆ ವಿಮಾನದಲ್ಲಿ ಬರುವಾಗ ಪರಿಚಯವಾದ ಇರಾನ್‌ನ ಯುವತಿಯೊಬ್ಬರನ್ನು ಅಲಿ ಪ್ರೀತಿಸುತ್ತಿದ್ದಾರಂತೆ. ಆರು ತಿಂಗಳ ಬಳಿಕ ಮದುವೆ ಮಾಡಿಕೊಳ್ಳುವ ಸಿದ್ಧತೆಯಲ್ಲಿದ್ದಾರೆ.

■ ಎನ್.ನವೀನ್ ಕುಮಾರ್